ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು. ಈಗ ಇಲ್ಲಿ ಅನೇಕ ವಿಚಾರಗಳು ಪ್ರಸ್ತಾಪಿಸಲ್ಪಡುತ್ತಿವೆ. ಅವುಗಳಲ್ಲಿ ಅವರ ಸಲಹೆ ಬಹಳ ಮುಖ್ಯವಾಗಿರುವುದರಿಂದ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ಅವರು ತಮ್ಮ ಆಸನಕ್ಕೆ ಹೋದರೆ ಒಳ್ಳೆಯದು. ನಂತರ ನಾನು ಅವರನ್ನು ಕರೆಸಿ ಮಾತನಾಡಿಸುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ನಾನು ತಮಗೆ 16ನೇ ತಾರೀಖಿನಂದೇ ಒಂದು ವಿಚಾರದ ಬಗ್ಗೆ ಪತ್ರವನ್ನು ಕಳುಹಿಸಿ ಕೊಟ್ಟಿದ್ದೆ. ಪಟ್ಟಿಯಲ್ಲಿ ನನ್ನ ಹೆಸರಿದೆ. ತಾವು ಬೇರೆಯವರಿಗೆಲ್ಲಾ ಅವಕಾಶವನ್ನು ಕೊಡುತ್ತಿದ್ದೀರಿ. ಇದುವರೆಗೂ ನನ್ನ ಹೆಸರನ್ನು ಕರೆದಿಲ್ಲ. ತಾವು ಕರೆಯುತ್ತೀರಿ ಎಂದು ನಾಣು ಕಾಯುತ್ತಿದ್ದೇನೆ. ಆದರೆ ಬೇರೆಯವರು ಯಾರ್‍ಯಾರು ಬೇಕೋ ಅವರು ಎದ್ದು ಅಹರಷ್ಟಕ್ಕೆ ಅವರೇ ಹೇಳುತ್ತಿದ್ದಾರೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಒಬ್ಬೊಬ್ಬರಾಗಿ ಕರೆಯುತ್ತೇನೆ. ತಮಗೂ ಅವಕಾಶ ಮಾಡಿಕೊಡುತ್ತೇವೆ.

ವಿಷಯ : ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಹೋಗಲು ಮನವಿ

ಶ್ರೀ ಎಂ.ಪಿ. ಪ್ರಕಾಶ್ : ವಾಟಾಳ್ ನಾಗರಾಜ್‌ರವರು ಎತ್ತಿರುವಂಥ ಪ್ರಶ್ನೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರ ಜೊತೆ ಮಾತನಾಡಿ, ಅವರ ಪ್ರಶ್ನೆಗೆ ಸಮಾಧಾನಕರವಾಗಿರತಕ್ಕಂಥ ಉತ್ತರವನ್ನು ಸರ್ಕಾರದಿಂದ ಕೊಡಿಸುತ್ತೇನೆ, ಅವರ ಕೊಣೆಗೆ ಕರೆಸಿ ಮಾತನಾಡುತ್ತೇನೆ. ಹಿರಿಯ ಸದಸ್ಯರುಗಳು ಅನೇಕ ವಿಚಾರಗಳನ್ನು ಎತ್ತಿದ್ದಾರೆ. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬಂದು ಸಹಕರಿಸಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೆ, ಇಲ್ಲೇ ಉತ್ತರ ಕೊಡಿಸುತ್ತೇನೆ, ಅಕಸ್ಮಾತ್ ಸಮಯದ ಅಭಾವವಿತ್ತು ಎಂದರೆ, ನಿಮ್ಮನ್ನು ಅವರ ಕೊಣೆಗೆ ಕರೆಸಿ ವಿಚಾರಗಳನ್ನು ಮಾತನಾಡಿಸುತ್ತೇನೆ. ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬರಬೇಕು.

ಅಧ್ಯಕ್ಷರು : ದಯಮಾಡಿ, ತಾವು ತಮ್ಮ ಸ್ಥಾನಕ್ಕೆ ಹಿಂತಿರುಗಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಅಧ್ಯಕ್ಷರು : ಈಗ ಎಂ.ಪಿ. ಕುಮಾರಸ್ವಾಮಿಯವರು, ತಾವು ಮಾತನಾಡಿ.

ಎ) ವಿಷಯ : ಜಿಲ್ಲಾ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಕಳೆದ ಸರ್ಕಾರ, ಬೇಲೂರು ಘೋಷಣೆಯಂತೆ, ಕುಡಿಯುವ ನೀರಿನ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಗೆ ವರ್ಗಾಯಿಸಿ ಆದೇಶ ಹೊರಡಿಸಿತ್ತು. ಆದರೆ ಇವತ್ತಿಗೂ ಕೂಡ ಗ್ರಾಮ ಪಂಚಾಯಿತಿಗಳಿಗೆ ಹಣ ಬಂದಿಲ್ಲ. ಜಿಲ್ಲಾ ಪಂಚಾಯಿತಿಗಳಲ್ಲಿ ಕಳೆದ 6–7 ತಿಂಗಳುಗಳಿಂದ ಯಾವುದೇ ಕುಡಿಯುವ ನೀರಿನ ಕಾಮಗಾರಿ ಆಗುತ್ತಿಲ್ಲ. ಇದು ಸರ್ಕಾರದ ನೀತಿ. ಇದು ನಮಗೆ ತಪ್ಪಾಗಿ ಕಾಣುತ್ತಿದೆ. ಶಾಸಕರಾದ, ನವು, ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯನ್ನಾಗಲೀ ಅಥವಾ ಅಧ್ಯಕ್ಷರನ್ನಾಗಲೀ ಕುಡಿಯುವ ನೀರನ್ನು ಕೇಳಲು ನಮಗೆ ಮುಜುಗರವಾಗುತ್ತದೆ. ಆದ್ದರಿಂದ, ಆ ಕಾಮಗಾರಿಯನ್ನು ಜಿಲ್ಲಾ ಪಂಚಾಯಿತಿಯವರು ಅನುಷ್ಠಾನಗೊಳಿಸಿದರೆ ಒಳ್ಳೆಯದು. ಆಗ ನಮ್ಮ ಘನತೆಯೂ ಸ್ವಲ್ಪ